## ಗದ್ಯಪಾಠ – 1

**ಶಬರಿ** **– ಪು. ತಿ. ನರಸಿಂಹಾಚಾರ್**

### ಕವಿಪರಿಚಯ

**ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ಯ** ಅವರು **ಕ್ರಿ. ಶ. 1905** ರಲ್ಲಿ ಮಂಡ್ಯ ಜಿಲ್ಲೆಯ **ಮೇಲುಕೋಟೆ**ಯಲ್ಲಿ ಜನಿಸಿದರು. ಇವರು **ಶಬರಿ,** ಅಹಲ್ಯೆ, ಗೋಕುಲ ನಿರ್ಗಮನ, ಕವಿ ಮತ್ತು ದೋಣಿಯ ಬಿಯದ, ವಿಕಟಕವಿ ವಿಜಯ, ಹಂಸ ದಮಯಂತಿ ಮೊದಲಾದ ಕೃತಿಗಳನ್ನೂ ರಚಿಸಿದ್ದಾರೆ. ಶ್ರೀಯುತರ **'ಶ್ರೀ ಹರಿಚರಿತೆ'** ಕೃತಿಗೆ ಕರ್ನಾಟಕ ಸರ್ಕಾರದಿಂದ **'ಪಂಪ ಪ್ರಶಸ್ತಿ'** ನೀಡಿ ಗೌರವಿಸಲಾಗಿದೆ. ಶ್ರೀಯುತರಿಗೆ ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

### ಅರ್ಥೈಸಿ ಓದಿ

**ಗೀತನಾಟಕ** = ಛಂದೋಬದ್ಧವಾದ ಹಾಡುಗಳಲ್ಲಿ ಸಂಭಾಷಣೆಗಳನ್ನೊಳಗೊಂಡಿರುವ ದೃಶ್ಯಕಾವ್ಯ. **ಮೇಳ** = ಸಂಗೀತಗಾರ, ವಾದ್ಯಗಾರ, ನರ್ತಕರು ಅಥವಾ ನಟರು ಸಾಮೂಹಿಕವಾಗಿ ಮಾಡುವ ಕಲಾಪ್ರದರ್ಶನ. **ಮತಂಗ** = ಒಬ್ಬ ಋಷಿಯ ಹೆಸರು. **ಶ್ರಮಣಿ** = ಸಂನ್ಯಾಸಿನಿ. **ದಶರಥ** = ಶ್ರೀರಾಮನ ತಂದೆ. **ಸಿದ್ಧರು** = ಸಾಧಕರು. **ಮರುಳು** = ಹುಚ್ಚು / ಬುದ್ಧಿಭ್ರಮಣೆಯಾದ ವ್ಯಕ್ತಿ / ದೆವ್ವ. **ಮಧುಪರ್ಕ** = ಮೊಸರು, ತುಪ್ಪ, ನೀರು, ಜೇನುತುಪ್ಪ, ಸಕ್ಕರೆ– ಈ ಐದರ ಮಿಶ್ರಣವುಳ್ಳ ಪಾನೀಯ. **ಸನ್ಮಂಗಳ** = ಒಳಿತು.. **ಗದ್ಗದಿಸು** = ಕಂಠ ಬಿಗಿದು ಮಾತು ಅಸ್ಪಷ್ಟವಾಗು.

### ಪದವಿಂಗಡಣೆ (ಸಮಾನಾರ್ಥಕಪದ / ಹೊಸಗನ್ನಡರೂಪ)

ಮತಂಗಾಶ್ರಮದಲ್ಲಿ (ಮತಂಗ ಋಷಿಯ ಆಶ್ರಮ) ತನ್ನ ಪರ್ಣಶಾಲೆಯ (ಎಲೆ ಮತ್ತು ಹುಲ್ಲಿನಿಂದ ಕಟ್ಟಿದ ಮನೆ) ಮುಂದಿನ ವನದಲ್ಲಿ ಶಬರಿ ಹಂಬಲುಗೊಂಡಿದ್ದಾಳೆ (ತವಕಗೊಂಡಿದ್ದಾಳೆ). ಶ್ರಮಣಿಯಂತೆ (ಸಂನ್ಯಾಸಿನಿಯಂತೆ) ರೂಪ, ವೃದ್ಧೆ (ವಯಸ್ಸಾದ) ಜಟಿಲೆ (ಸಿಕ್ಕುಸಿಕ್ಕಾದ / ಕೆದರಿದ ಕೂದಲುವುಳ್ಳವಳು), ಚೀರ (ನಾರುಬಟ್ಟೆ), ಕೃಷ್ಣಾಜಿನಾಂಬರೆ (ಜಿಂಕೆಯ ಚರ್ಮದ ಬಟ್ಟೆ ಧರಿಸಿದವಳು).

**ಶಬರಿ :** ನಿಂತಲ್ಲಿಯೆ ನಾ ನಿಂತಿರುವೆ । ರಾಮಾ ನೀನು ಎಂದು ಐತರುವೆ (ಬರುವೆ) ನೀನು ಇಹುದೆಲ್ಲೋ (ಇರುವುದೆಲ್ಲೋ) ನಾನು ಅರಿಯೆ (ತಿಳಿಯೆ) । ನಿನ್ನ ಎಡೆಗೆ (ಬಳಿಗೆ) ಐದುವ (ಬರುವ) ಬಳಿಯ (ದಾರಿಯ) ಅರಿಯೆ (ತಿಳಿಯೆ) ನೀ ಬಹೆ (ಬರುವೆ) ಎನ್ನುವ ನೆಚ್ಚಿನೊಳು (ನಂಬಿಕೆಯಲ್ಲಿ) । ನಾನು ಇಹೆ (ಇರುವೆ) ಬಯಕೆಯ ಹುಚ್ಚಿನೊಳು (ಹುಚ್ಚಿನಲ್ಲಿ) !!

**ರಾಮ :** ದೊರೆವಳೇ (ದೊರೆಯುವಳೇ) ಸೀತೆ । ಭೂಮಿಜಾತೆ (ಭೂಮಿಯಲ್ಲಿ ಜನಿಸಿದವಳು = ಸೀತೆ) ಆತ್ಮ ಕಾಮ (ಬಯಕೆ) ಕಲ್ಪಲತೆ ದೊರೆವಳೇ ಚೆಲುವೆ?ಎರೆವೆ ಎರೆವೆ (ಬೇಡುವೆ ಬೇಡುವೆ) ಗಿರಿವನವೇ ಪೇಳಿರಿ = ಹೇಳಿರಿ. ನಾನ್ + ಎರೆವೆ (ಬೇಡುವೆ) ದೊರೆವಳೇ? (ದೊರೆಯುವಳೇ?) ದೊರೆಯಳೇ? (ದೊರೆಯುವುದಿಲ್ಲವೇ?) । ಅವಳ ನೆಲೆ (ಇರುವ ಸ್ಥಳ) ಯಾರು ಅರಿಯರೇ (ತಿಳಿದಿಲ್ಲವೇ), ಪೇಳಿ (ಹೇಳಿ) ಎನ್ನ (ನನ್ನ) ಅರಸಿ (ರಾಣಿ) ದೊರೆಯಳೇ? (ದೊರೆಯುವುದಿಲ್ಲವೇ?) ಈ ಬೇಗೆ (ದುಃಖ) ಕೆಡದಲಾ (ನಾಶವಾಗುತ್ತಿಲ್ಲವಲ್ಲ)। ನನ್ನ ಎದೆಯ ಬಿಡದಲಾ (ಬಿಡುತ್ತಿಲ್ಲವಲ್ಲ) ಈ ಜಗವ ಸುಡದಲಾ (ಸುಡುತ್ತಿಲ್ಲವಲ್ಲ).

**ಲಕ್ಷ್ಮಣ :** ತಾಳಿಕೋ (ಸಹನೆ ತಂದುಕೋ) ಅಣ್ಣ ತಾಳಿಕೋ (ಸಹನೆ ತಂದುಕೋ)। ಸೂರ್ಯನೇ ತೇಜ (ಕಾಂತಿ) ಕೆಡೆ (ಕಳೆದುಕೊಳ್ಳಲು) ತೇಜಕೆ (ಕಾಂತಿಗೆ) ಎಡೆ (ಆಶ್ರಯ) ಯಾರು? ರಾಮನೇ ಧೈರ್ಯ ಕೆಡೆ (ಕಳೆದುಕೊಳ್ಳಲು) ಸ್ಥೈರ್ಯಕೆ (ಮನಸ್ಸಿನ ಗಟ್ಟಿತನಕ್ಕೆ) ಎಡೆ (ಆಶ್ರಯ) ಯಾರು?

**ರಾಮ :** [ಸ್ಥೈರ್ಯವಾಂತು] (ಮನಸ್ಸಿಗೆ ಸಮಾಧಾನ ಮಾಡಿಕೊಂಡು) ಅವಳ ನೆನಪಿನ ಸೆಳೆತಕೆ (ಮೋಹಕ್ಕೆ) ಎನ್ನ (ನನ್ನ) ಆತ್ಮ ಸಿಲ್ಕೆ (ಸಿಲುಕಲು / ಸೆರೆಯಾಗಲು)। ಎನ್ನ (ನನ್ನ) ಬಗೆಗೆ (ಮನಸ್ಸಿಗೆ) ಅನಿವಾರ್ಯವು (ತಪ್ಪಿಸಲಾಗದ್ದು) ಈ ಶೋಕದ (ದುಃಖದ) ಉಲ್ಕೆ (ಉರಿಯುವ ಕೊಳ್ಳಿ / ಪಂಜು). ಇಗೋ (ಇಲ್ಲಿ) ನೋಡು ಲಕ್ಷ್ಮಣ ತಾಪಸರ (ತಪಸ್ವಿಗಳ) ಬೀಡು (ತಾಣ). ಇದ (ಇದನ್ನು) ನೋಡಿ ಮರುಕೊಳಿಸಿತು (ಮತ್ತೆ ಕಾಣಿಸಿಕೊಂಡಿತು) ಎನಗೆ (ನನಗೆ) ಅವಳ ಪಾಡು (ಕಷ್ಟ).

**ಲಕ್ಷ್ಮಣ :** ಅಹುದು (ಹೌದು) ದಿಟ (ನಿಜ) ಚಿತ್ರಕೂಟವೆ ಮನಕೆ ಬಹುದು (ಬರುವುದು)। ಜತೆಯೊಳು ಅತ್ತಿಗೆ ಇದ್ದ ಬಗೆಯ (ಭಾವನೆಯ) ತಹುದು (ತರುವುದು). ಹಾ! ಪಾಪಿ, ನಾ (ನಾನು) ಆಕೆಯನು (ಆಕೆಯನ್ನು) ಒಂಟಿಯೊಳೆ (ಒಂಟಿಯಾಗಿ) ಬಿಟ್ಟೆ। ಎನ್ನ (ನನ್ನ) ಅಹಂಕೃತಿಗೆಯೇ (ಅಹಂಕಾರಕ್ಕೇ) ಮನ್ನಣೆಯ (ಗೌರವವ) ಕೊಟ್ಟೆ (ಕೊಟ್ಟೆನು).

**ರಾಮ :** ಮರುಗದಿರು ತಮ್ಮಯ್ಯ ಆದುದು ಆಯಿತ್ತು। ನಿಮ್ಮನು ಇಂತು (ಈ ರೀತಿ) ಆ ದೈವ ಮರುಳು ಮಾಡಿತ್ತು (ಭ್ರಾಂತಿಗೊಳಿಸಿತು).
ದನು ಪೇಳ್ದ (ಹೇಳಿದ) ದಾರಿಯೊಳೆ (ದಾರಿಯಲ್ಲೇ) ಬಂದಿಹೆವೆ (ಬಂದಿರುವೆವೆ)? ಶ್ರಮಣಿ (ಸಂನ್ಯಾಸಿನಿ) ಆಶ್ರಮ ಇದುವೆ?

ಅಗೊ ಲಕ್ಷ್ಮಣಾ, ಅತ್ತ ಆವುದು (ಯಾವುದು) ಈ ಮರುಳು (ದೆವ್ವ / ಹುಚ್ಚು)?। ನಮ್ಮ ಎಡೆಗೆ (ಬಳಿಗೆ) ಬರುತಿಹುದು ಏನು ಇದರ ಹುರುಳು (ಅಪೇಕ್ಷೆ / ಬಯಕೆ)?

**ಲಕ್ಷ್ಮಣ :** ಮರೆಗೆ ಬಾ ಅಣ್ಣಯ್ಯ, ಪರಿಕಿಸುವ (ಪರೀಕ್ಷಿಸುವ / ಗಮನಿಸುವ) ಮುನ್ನ (ಮೊದಲು)। ಇದಿರುಗೊಳೆ (ಎದುರಿಗೆಹೋದರೆ) ಏನಹುದೊ (ಏನಾಗುವುದೊ) ಬನ್ನ (ತೊಂದರೆ).

**[ಮರೆಯೊಳು ಇರುವರು. ಶಬರಿ ತಳಿರು ಹೂ ಹಣ್ಣುಹಂಪಲಗಳನ್ನು ತಲೆ ಕಂಕುಳು ಕೈಯಲ್ಲಿ ಕೊಂಡು ಬರುವಳು.]**

**ಶಬರಿ :** ರಾಮ ಬಾರದೇ । ನನಗೆ ಏನು ತೋರದೇ ॥ಪ॥

ಅವ (ಅವನು) ಸವಿದಲ್ಲದೆ ಸವಿಯಾಗದ ಈ । ಕಡುಸವಿ ಹಣ್ಗಳನ್ (ಹಣ್ಣುಗಳನ್ನು) ಏಗೆಯ್ವೆಂ (ಏನು ಮಾಡಲಿ)

ಮಧುಕರ ಗೀತದ (ದುಂಬಿಯ ಝೇಂಕಾರದ) ಮಧು (ಜೇನುತುಪ್ಪ) ಊರ್ (ಅಧಿಕವಾಗಿ) ಇರುವ ಈ । ಮಧುಪರ್ಕವನ್ (ಮೊಸರು, ತುಪ್ಪ, ನೀರು, ಜೇನುತುಪ್ಪ, ಸಕ್ಕರೆ ಈ ಐದರ ಮಿಶ್ರಣವುಳ್ಳ ಪಾನೀಯವನ್ನು) ಆನ್ (ನಾನು) ಆರಿಗೆ (ಯಾರಿಗೆ) ಈವೆಂ (ಕೊಡುವೆನು) ॥ ರಾಮ ಬಾರದೇ. . . .

ಬಾ ರಾಮಾ, ಬಾ ರಾಮಾ, ಬಾರೈ । ಬಾ ಬಾ ಬಗೆ (ಮನದ) + ಇರುಳಿನ (ರಾತ್ರಿಯ) ಪೆರೆಯೇ (ಚಂದಿರನೇ) ಕೋ (ತೆಗೆದುಕೋ) ಕೋ (ತೆಗೆದುಕೋ) ಹಣ್ಗಳ (ಹಣ್ಣುಗಳ) ಕೋ (ತೆಗೆದುಕೋ) ಹೂಗಳ ಕೋ (ತೆಗೆದುಕೋ) । ಎಲ್ಲವ (ಎಲ್ಲವನ್ನು) ಕೋ (ತೆಗೆದುಕೋ) ಎನ್ನೊಳಮ್ (ನನ್ನಲ್ಲಿಯೂ) ಒರೆಯೇ (ಪರೀಕ್ಷೆಯೇ).

ರಾಮ ಬಾರದೇ । ನನಗೆ ಏನು ಸೇರದೇ.

**[ಪರ್ಣಶಾಲೆಯೊಳಕ್ಕೆ ಹೋಗುವಳು. ರಾಮ ಲಕ್ಷ್ಮಣರು ಕಾಣಿಸಿಕೊಳ್ಳುತ್ತಾರೆ.]**

**ರಾಮ :** ಎನಗೆ (ನನಗೆ) ಇನಿತು (ಇಷ್ಟು) ಹಂಬಲಿಪ (ಹಂಬಲಿಸುವ) ಜಟಿಲಕಬರಿ (ಸಿಕ್ಕಾದ ಜಡೆಯುಳ್ಳವಳು) । ಆ ಉದರಮುಖನ್ (ಕಬಂಧನು) ಒರೆದ (ಹೇಳಿದ) ಶ್ರಮಣಿ (ಸಂನ್ಯಾಸಿನಿ) ಶಬರಿ. ಉಪಕಾರವು ಇನಿತಿಲ್ಲ (ಸ್ವಲ್ಪವು ಇಲ್ಲ) ಈಕೆಗೆ ಎನ್ನಿಂದ (ನನ್ನಿಂದ) । ಆದೊಡೆಯು (ಆದರೂ) ನೆನೆಯುತಿಹಳು ಎನಿತು(ಎಷ್ಟು) ಅರ್ತಿಯಿಂದ (ಪ್ರೀತಿಯಿಂದ). ನಾಚುತಿಹೆನ್ (ನಾಚುತಿರುವೆನು) ಈ ಪೂಜ್ಯೆಯ (ಗೌರವಾನ್ವಿತೆಯ) ಈ ನಲುಮೆಯಿಂದ (ಅನುರಾಗದಿಂದ).

**ಲಕ್ಷ್ಮಣ :** ನಿನ್ನ ನೋಡದೆ ಇಂತು ಮರುಳಾದ (ಹುಚ್ಚಿಯಾದ) ಈ ಸಿದ್ಧೆ । ಇನ್ನು ನೋಡಿದ ಬಳಿಕ ಏನಪ್ಪಳೋ (ಏನಾಗುವಳೋ) ವೃದ್ಧೆ (ಮುದುಕಿ) !

**ರಾಮ :** ರೂಪಕೂ (ರೂಪಕ್ಕೂ) ನಾಮ (ಹೆಸರು) ಮಿಗಿಲು (ಹೆಚ್ಚಾದುದು) ಆತ್ಮ ಸುರಭಿ (ಸುಗಂಧ / ಸುವಾಸನೆ) ಅದು । ಎನ್ನ (ನನ್ನ) ಕಾಣುತಲು (ಕಾಣುತ್ತಲೇ) ಇವಳ ಬೆರಗು (ಆಶ್ಚರ್ಯ / ವಿಸ್ಮಯ) ತಿಳಿಯುವುದು (ಸಮಾಧಾನ ಹೊಂದುವುದು).

**ಲಕ್ಷ್ಮಣ :** ನಿತ್ಯ (ಪ್ರತಿದಿನ) ನೋಡುತಲಿಹೆನು (ನೋಡುತಲಿರುವೆನು) ಬೆರಗು (ಆಶ್ಚರ್ಯ / ವಿಸ್ಮಯ) ತಣಿಯದಿದೆ (ಸಮಾಧಾನಗೊಂಡಿಲ್ಲ) । ಪರಿಕಿಸುವ (ಪರೀಕ್ಷಿಸುವ) ಬಾ ಇದನು ಶ್ರಮಣಿ (ಸಂನ್ಯಾಸಿನಿ) ಆಶ್ರಮದೆ (ಆಶ್ರಮದಲ್ಲಿ).

**ರಾಮ :** ನಡೆ ಮುಂದೆ, ಲಕ್ಷ್ಮಣ.

**ಲಕ್ಷ್ಮಣ :** ಇಂದು ನೀನೆ ಮುಂದೆ । ನಾನ್ (ನಾನು) ಇರುವೆ (ಇರುವೆನು) ಹಿಂದೆ । ಮೊದಲ ದಿಟ್ಟಿಗೆ (ದೃಷ್ಟಿಗೆ / ನೋಟಕೆ) ನೀನು । ಬಳಿಕ ನಾನು – [**ಹೊರಡುವರು**]. **[ಒಳತೆರೆ ಎದ್ದು ವಿಶಾಲವಾದ ಶಬರಿ ಆಶ್ರಮವನ್ನು ತೋರುವುದು. ಅಲ್ಲಿ ದೂರದಲ್ಲಿ, ಹಿಂಬದಿಗೆ ವೇದಿಕೆಯಿದೆ. ಅದರ ಸುತ್ತ ಆಶ್ರಮದ ಸಿದ್ಧರು ಅಲಂಕರಿಸಿ ಹೋದ ಹೂವು ಇನ್ನೂ ಬಾಡದಂತೆ (ಒಣಗದಂತೆ) ಇವೆ. ವೇದಿಯಲ್ಲಿ (ಯಜ್ಞ ಮಾಡುವ ಸ್ಥಳದಲ್ಲಿ) ಅಗ್ನಿ (ಬೆಂಕಿ) ಹೊಗೆಯಾಡುತ್ತಿದೆ. ಶಬರಿ ನಿನ್ನೆ ರಾಮನಿಗೆಂದು ಆರಿಸಿ ತಂದ, ಈಗ ಬಾಡಿ (ಒಣಗಿ) ಹೋಗಿರುವ ಹೂ ಹಣ್ಣು ತಳಿರುಗಳನ್ನು (ಚಿಗುರುಗಳನ್ನು) ವಿಂಗಡಿಸುತ್ತಾ ಅವುಗಳ ಜಾಗದಲ್ಲಿ ಹೊಸದನ್ನು ಇಡುತ್ತಾ ಇದ್ದಾಳೆ. ಅವುಗಳನ್ನು ಉದ್ದೇಶಿಸಿ ಈ ತೆರ (ರೀತಿ) ಹಾಡುತ್ತಾಳೆ.]**

**ಶಬರಿ :** ನಿನ್ನ ಎಳಮೆ (ಎಳೆಯತನ) ಮೃದುತೆಯನು (ಕೋಮಲತೆಯನ್ನು) ಅವನ ಸ್ಪರ್ಶಕೆ (ಮುಟ್ಟುವಿಕೆಗೆ) ತೆರದೆ(ನೀಡದೆ) । ಬರಿಗಾಳಿಗೆ ಆರಿರುವ (ಒಣಗಿರುವ) ನಿನ್ನೆ (ನಿನ್ನೆಯ) ಚೆಂದಳಿರೇ (ಕೆಂಪಾದ ಚಿಗುರೇ), ತುಂಬಿ (ದುಂಬಿ) ಬಂಬಲ (ಸಮೂಹ) ಹೊಗಳ್ವೆಗೆ (ವರ್ಣನೆಗೆ) ಇಂಬಾದ (ಆಶ್ರಯವಾದ) ಕಂಪಿನಿಂದ (ಸುವಾಸನೆಯಿಂದ) ಅವನ ಅಸುವನು (ಜೀವವನು) ಉದ್ದೀಪಿಸದೆ (ಉತ್ತೇಜಿಸದೆ) ಸೊರಗಿದ (ಬಾಡಿದ) ಅಲರೇ (ಅರಳಿದ ಹೂವೇ), ಅವನ ಪ್ರಾಣಾಹುತಿಗೆ (ಜೀವನಾಹಾರಕ್ಕೆ) ಬರದೆ (ದೊರೆಯದೆ) ರುಚಿ ಹದ ಕೆಟ್ಟು । ಹುಳುವಿಗೆ ಆಸರೆ ಆದ ಎಲೆ ವನ್ಯ (ಕಾಡಿನ) ಫಲವೇ (ಹಣ್ಣುಗಳೇ) ಮೀಸಲಾಗದೆ (ಬಳಸಲಾಗದೆ) ಇಂತು (ಈ ರೀತಿ) ಮಾಸಲಾಗುವ (ಮಲಿನವಾಗುವ) ಇವನು (ಇವುಗಳನ್ನು) । ಮರಮರಳಿ (ಮತ್ತೆಮತ್ತೆ) ಹೊಸತರಿಂದ ಅಣಿಗೈವ (ಸಿದ್ಧಮಾಡುವ) ಛಲವೇ (ಹಠವೇ).

**[ಮಾಲೆಯನ್ನು ಕಟ್ಟುತ್ತಾ ಹಾಡುತ್ತಾಳೆ.]**

ಎಂದು ಕಾಂಬೆ (ಕಾಣುವೆ) ನಾ ರಾಮನನ್ ಎಂದು ಕಾಂಬೆ (ಕಾಣುವೆ) ನಾ ॥ಪ॥ ದಶರಥನ ಪುತ್ರನಂತೆ (ಮಗನಂತೆ) । ಸಾಧು ಜನರ ಮಿತ್ರನಂತೆ (ಗೆಳೆಯನಂತೆ) ಧೀರ ಶೂರ ವೀರ ಗಂಭೀರ ಸದ್ಗುಣ ಸಾರನಂತೆ – ಎಂದು ಕಾಂಬೆ (ಕಾಣುವೆ) ನಾ ...

ಅಂಜಿಸುವವರು (ಹೆದರಿಸುವವರು) ಅಂಜುವಂತೆ (ಹೆದರುವಂತೆ) । ಬಿಲ್ಲ ಹಿಡಿದು ಬರುವನಂತೆ ಆದೊಡೆ (ಆದರೆ) ಬಲು(ತುಂಬ) ಸೌಮ್ಯನಂತೆ (ಸೌಮ್ಯಸ್ವಭಾವದವನಂತೆ)। ಹಸುಳೆಯಂತೆ (ಮಗುವಿನಂತೆ) ಕಾಂಬನಂತೆ (ಕಾಣುವನಂತೆ) – ಎಂದು ಕಾಂಬೆ (ಕಾಣುವೆ) ನಾ ...

ಅರಸುತನವ (ರಾಜ ಪದವಿಯ) ತೊರೆದನಂತೆ (ತ್ಯಾಗ ಮಾಡಿದನಂತೆ) । ತವಸಿತನವ (ತಪಸ್ವಿತನವ) ಕೊಂಡನಂತೆ (ಹಿಡಿದನಂತೆ)

ತಮ್ಮನ ಒಡನೆ (ಜತೆ) ಬನಕೆ (ಕಾಡಿಗೆ) ಬರಲು । ಮನದಿ (ಮನದಲ್ಲಿ) ಭಯವೆ ಇಲ್ಲವಂತೆ – ಎಂದು ಕಾಂಬೆ (ಕಾಣುವೆ) ನಾ ...

ಕೆಟ್ಟ ಕನಸಿನ ಇರುಳ (ರಾತ್ರಿಯ) ಕಳೆವ (ಕಳೆಯುವ) । ಸುಪ್ರಭಾತದಂಥ (ಸುಂದರವಾದ ಬೆಳಗಿನಂಥ) ಅವನನು ಗುರುಸಿದ್ಧರೆ (ಗುರುಗಳು ಸಿದ್ಧರು) ಮೆಚ್ಚಿದಂಥ । ಸನ್ಮಂಗಳ (ಶುಭಕರ) ಮೂರುತಿಯನು – ಎಂದು ಕಾಂಬೆ (ಕಾಣುವೆ) ನಾ ...

**[ಕಟ್ಟಿದ ಮಾಲೆಗೆ ಮುದ್ದಿಕ್ಕುವಳು]**

**ರಾಮು :** [ಬಾಗಿಲಿನ ಬಳಿ ಅದನ್ನು ತುಂಬಿ ನಿಂತು, ಲಕ್ಷ್ಮಣ ಹಿಂಬದಿಗೆ ಇರಲು] ತಾಯಿ, ದಾರಿಗರಿಗೆ (ಪ್ರಯಾಣಿಕರಿಗೆ) ಬೀಡು (ಆಶ್ರಯ) ಇಲ್ಲಿ ದೊರೆವುದೇ?

**ಶಬರಿ :** [ನಡುಗುವ ಎದೆಯಿಂದ ಹಿಂತಿರುಗಿ ನಿಟ್ಟಿಸಿ ಮೊದಲು ಬೆರಗು ಕಳೆದ ಮೇಲೆ] ನೀ ರಾಮನೇ, ಮಹಾಪುರುಷ!

**ರಾಮು :** ಅಹುದು (ಹೌದು) ತಾಯಿ, ಅಹುದು (ಹೌದು) ರಾಮನ್ (ರಾಮನು) ಎಂಬರ್ (ಎನ್ನುವರು) ನನ್ನ; ಈತ ನನ್ನ ಅನುಜ (ತಮ್ಮ) ಸೌಮಿತ್ರಿ (ಸುಮಿತ್ರೆಯ ಮಗ = ಲಕ್ಷ್ಮಣ).

**ಶಬರಿ :** ರಾಮ ಲಕ್ಷ್ಮಣರೆ ನೀವು । ರಾಮನೇ ನೀನು।

[ಶಬರಿ ತುಂಬ ಸಡಗರಗೊಳ್ಳುತ್ತಾಳೆ. ಮುಂದೆ ಮೇಳದವರು ಹಾಡುವ ಹಾಡು ಅವಳು ಗೈದ (ಮಾಡಿದ) ಉಪಚಾರವನ್ನು ಬಣ್ಣಿಸುತ್ತದೆ (ವರ್ಣಿಸುತ್ತದೆ).

ಕಂಡಳು ಶಬರಿ । ರಾಮ ಬಂದು ನಿಂದಿರುವುದ (ನಿಂತಿರುವುದನ್ನು) ॥ಪ॥

ಕಂಡು ಬೆರಗು (ಆಶ್ಚರ್ಯ) ಕಳೆದ ಬಳಿಕ । ಸನಿಯಕೆ (ಹತ್ತಿರಕ್ಕೆ) ಐದಿ (ಬಂದು) ಮೈಯ (ಮೈಯನ್ನು) ಮುಟ್ಟಿ ಪದದಿ (ಕಾಲಿಗೆ) ಕೆಡೆದು (ಬಿದ್ದು) ಕೈಯ (ಕೈಯನ್ನು) ಕಣ್ಣಿಗೆ ಒತ್ತಿಕೊಂಡು ಹನಿಯ (ಕಂಬನಿಯ) ಸುರಿಸಿ!! ಬನ್ನಿರಿ ಎಂದು ಗದ್ಗದಿಸುತ್ತ (ದುಃಖಿಸುತ್ತ) ಅಯ್ಯೊ ಏನೂ ಅಣಿಯೆ (ಸಿದ್ಧವೇ) ಇಲ್ಲ.

ನಿನ್ನೆಯಷ್ಟು ಚೆನ್ನವಿಲ್ಲ । ಎನ್ನುತ ಬಲು (ಬಹಳ) ಹಂಬಲಾಂತು (ತವಕಗೊಂಡು)!! . . .

ತನ್ನ ಬಗೆಯ (ಮನಸ್ಸಿನ) ಬಯಕೆಯಂತೆ (ಆಸೆಯಂತೆ) । ಬಗೆ ಬಗೆಯ ಕಂಪನಿಡುವ (ಸುವಾಸನೆಯನ್ನು ನೀಡುವ) ವನಮಾಲೆಯ (ಕಾಡಿನ ಹೂಗಳ ಮಾಲೆಯ) ಕೊರಳಿಗೆ ಇಟ್ಟು (ಹಾಕಿ) । ಅಬ್ಬ ಎಂದು ಹಿಗ್ಗಿ ಹಿಗ್ಗಿ (ಸಂತಸಗೊಂಡು)!! ಇದು ರುಚಿ ಇದರಷ್ಟು ರುಚಿಯ । ಹಣ್ಣೆ ಇಲ್ಲ ಜಗದೊಳು (ಜಗತ್ತಿನಲ್ಲಿ) ಎಂದು ನಿಮಗೆ ಎಂದೆ ತಂದೆನು ಎಂದು । ತಾನೆ ಅವರ ಕೈಯೊಳು (ಕೈಯಲ್ಲಿ) ಇತ್ತು (ಕೊಟ್ಟು)!! ಪೂಜೆಯಿಂದ ಸುಪ್ರಸನ್ನರಾಗಿ ರಾಜಕುವರರ್ (ರಾಜಕುಮಾರರು) ಅಂದು ಮಂದಹಾಸ ತೋರೆ (ತೋರಲು). ನೋಡಿ । ಧನ್ಯಭಾವದಿಂದ ಕೂಡಿ !!

**[ಹೀಗೆ ಅವರಿಗೆ ಉಪಚಾರವನ್ನು ಮಾಡಿ ಶಬರಿ ತನ್ನ ಅಂತಸ್ಸುಖವನ್ನು ತೋರುವುದಕ್ಕೆ ಈ ತೆರ (ರೀತಿ) ಹಾಡಿಕೊಂಡು ನರ್ತಿಸುತ್ತಾಳೆ.]**

ಸುಖಿ ನಾ ಸುಖಿ ನಾ ಸುಖಿ ನಾನು

ಬರಿ ಸುಖಿ ಸುಮ್ಮನೆ (ಕಾರಣವಿಲ್ಲದೆ) ಸುಖಿ ನಾನು . . . ॥ಪ॥

ನಾನು ಇಲ್ಲದ ನಾನು ಆಗಿಹೆನು । ಆಸೆ ತೀರಿ ಹಾಯಾಗಿಹೆನು (ಹಾಯಾಗಿರುವೆನು)

ಹಂಬಲನು (ಹಂಬಲವನ್ನು) ಅಳಿದಿಹೆ ತುಂಬಿರುವೆನು ನಾ । ಸುಮ್ಮನೆಯೇ (ಕಾರಣವಿಲ್ಲದೆಯೇ) ಬಲುಸುಖಿ ನಾನು !! ಸುಖಿ ನಾ . . .

ಹೊಳೆ (ನದಿ) ಕಡಲಿಗೆ (ಸಮುದ್ರಕ್ಕೆ) ಸೇರುವ ತೆರದಿ (ರೀತಿಯಲ್ಲಿ) । ನಾವೆ (ದೋಣಿಯು) ರೇವಿಗೆ (ಬಂದರಿಗೆ) ಬಹ (ಬರುವ) ತೆರದಿ (ರೀತಿಯಲ್ಲಿ) ಬಗೆ ಬಗೆ ಹಾರೈಕೆಯ (ಬಯಕೆಯ) ಪಟ (ನೌಕೆಗೆ ಕಟ್ಟುವ ಹಾಯಿ) ಇಳಿಸಿ । ನಿಂತಿದೆ ಮನ ಇದೆ ಬಿಡುವೆನಿಸಿ (ಮುಕ್ತಿಯೆನಿಸಿ)!! ಸುಖಿ ನಾ . . .

ನಿಮ್ಮ ನೋಡುತ ಸುಖಿ ನಾನು । ನಿಮ್ಮನೆ ನುಡಿಸುತ ಸುಖಿ ನಾನು

ನಿಮ್ಮ ತಣಿವು (ತೃಪ್ತಿ) ನಿಮ್ಮ ಆನಂದದಿ (ಆನಂದದಲ್ಲಿ) ಸುಖಿ । ನಿಮ್ಮ ಎಡೆ (ಬಳಿ) ಸುಮ್ಮನೆ (ಕಾರಣವಿಲ್ಲದೆ) ಸುಖಿ ನಾನು!! ಸುಖಿ ನಾ . . .

ಇಂದು ಆಗಿಹೆ (ಆಗಿರುವೆನು) ನಾ ಬಲು (ತುಂಬ) ಹಗುರ (ಸಂತೋಷ) । ನೀಡಿಹುದೋ (ನೀಡಿರುವುದೋ) ಪರ (ದೇವರು/ಪರಲೋಕ) ತನ್ನ ಕರ (ಕೈ). ನಿನ್ನೆ ನಾಳೆ ಇನ್ನಿಲ್ಲ ಎನೆಗೆನೆ (ನನಗೆನಲು) । ಈ ನಲವೇ (ಆನಂದವೇ) ಚಿರವೆಂಬ (ಶಾಶ್ವತವೆಂಬ) ತೆರ (ರೀತಿ) !!
ಸುಖಿ ನಾ ಸುಖಿ ನಾ ಸುಖಿ ನಾನು
ಬರಿ ಸುಖಿ ಸುಮ್ಮನೆ (ಕಾರಣವಿಲ್ಲದೆ) ಸುಖಿ ನಾನು !!

**ರಾಮ :** ನಿನ್ನ ಆದರದೊಳು (ಪ್ರೀತಿಯಲ್ಲಿ) ಸುಖಿ ನಾವು । ನಿನ್ನ ಈ ಸೊಗದೊಳು (ಸುಖದಲ್ಲಿ) ಸುಖಿ ನಾವು ಕಾಡಿನೊಳು (ಕಾಡಿನಲ್ಲಿ) ಈ ಸವಿ (ಸುಖ / ಆನಂದ) ಕಾಣುವ ಪುಣ್ಯಕೆ (ಪುಣ್ಯಕ್ಕೆ) । ನಿನಗೆ ಎಂದು ಎಂದಿಗು ಋಣಿ ನಾವು !!

**ಶಬರಿ :** **[ರಾಮನ ಮಾತನ್ನು ಕೇಳಿ ತನ್ನ ಸೊಗದ (ಆನಂದದ) ಉನ್ಮಾದವನ್ನು (ಹುಚ್ಚನ್ನು) ಸ್ವಲ್ಪ ಹದಕ್ಕೆ (ಸರಿಯಾದ ಸ್ಥಿತಿಗೆ) ತಂದುಕೊಂಡು ಅವನನ್ನು ನೋಡುತ್ತ ಕೊನೆ ಕೊನೆಗೆ ಕಂಬನಿದುಂಬಿ (ಕಣ್ಣಲ್ಲಿ ನೀರು ತುಂಬಿ)]**
ಬಲು ಸಂತಸ ಬಲು ಸಂತಸ ಬಲು ಸಂತಸ ಎನಗೆ (ನನಗೆ)
ನನ್ನ ಆಸೆಯ ಜಾಡ (ಸುಳಿವ) ಹಿಡಿದು ಬಂದಿರೆಲ್ಯೆ (ಬಂದಿರುವಿರೇ) ಕೊನೆಗೆ
ದಣಿದಿರಯ್ಯ (ಆಯಾಸಗೊಂಡಿರುವಿರಯ್ಯ), ತಣಿದಿರಾ (ಸಮಾಧಾನ ಹೊಂದಿದಿರಾ) । ಹಸಿವು ತೃಷೆಯನು (ಬಾಯಾರಿಕೆಯನು) ಉಳಿದಿರಾ (ತೊರೆದಿರಾ)? ಬಡವೆ (ಬಡವಳು), ಒಬ್ಬಳೇ ಏನ(ಏನನ್ನು) ಗೈವೆ (ಮಾಡುವೆ), ನನಗೆ ಮರುಕ (ದಯೆ / ಕರುಣೆ) ತಳೆದಿರಾ (ಹೊಂದಿದಿರಾ)?

**ರಾಮ :** ಕಣ್ಣ ನೀರು ಇದೇಕೆ ತಾಯೆ, ತುಸ (ಸ್ವಲ್ಪವು) ಊಣಯ (ಕೊರತೆ) ಇಲ್ಲ.
ನಮ್ಮ ಅಯೋಧ್ಯೆ ಅರಮನೆಯೊಳು (ಅರಮನೆಯಲ್ಲಿ) ಇದಕು (ಇದಕ್ಕೂ) ಲೇಸು (ಒಳ್ಳೆಯದು / ಹಿತವಾದುದು) ಸಲ್ಲ (ದೊರೆಯದು). ಇಂದು ಹಳುವ (ಕಾಡು / ಅರಣ್ಯ) ಮರೆತೆವು । ಇಲ್ಲೆ ಮನೆಯನು ಅರಿತೆವು (ತಿಳಿದೆವು). ಇನಿತು (ಇಷ್ಟು) ಆದರ (ಪ್ರೀತಿ) ತೋರ್ವ (ತೋರುವ) ನಿನ್ನನು ಅಬ್ಬೆ (ತಾಯಿ) ಎಂದೆ ಕುರಿತೆವು (ತಿಳಿದೆವು).

**ಶಬರಿ :** ರೂಪಿನಂತೆ ಮಾತು ಕೂಡ ಎನಿತು (ಎಷ್ಟು) ಉದಾರ (ಧಾರಾಳ) ಆಗಿದೆ !
ಧನ್ಯೆ ನಾನು ಸಿದ್ಧರ ವರವು ಇಂದು ನನಗೆ ಫಲಿಸಿದೆ.
ನಿಮ್ಮ ಕಂಡ ಪುಣ್ಯವಂತೆ ; ಹಿಂಗಿಹೋಯಿತು (ಹೊರಟುಹೋಯಿತು) ಎಲ್ಲ ಚಿಂತೆ. ಗುರುವ (ಗುರುವನ್ನು) ಪೂಜೆ ಗೈದ (ಮಾಡಿದ) ತಣಿವು (ತೃಪ್ತಿ) ನನಗೆ ಸಂದಿತು (ದೊರಕಿತು) ಇಂತೆ ( ಈ ರೀತಿ).

**ರಾಮ :** ಇಂಥ ( ಈ ರೀತಿಯ) ಶಿಷ್ಯೆಯ ಅರ್ತಿ (ಪ್ರೀತಿ) ಪಡೆದ ನಿನ್ನ ಗುರುಗಳು
ಎಂಥರೋ (ಎಂಥವರೋ) ಅವರ ಮಹಿಮೆ ಕೇಳಿ ಬಲ್ಲೆ (ತಿಳಿದಿರುವೆ) ಎಂಥ ಶಾಂತದಾಂತರೊ (ಶಾಂತಿ ಸಂಯಮವುಳ್ಳವರೊ). ಅಳಲನು (ದುಃಖವನ್ನು) ಎಲ್ಲ ಮರೆಸಿ ಶಾಂತಿ ಒಂದ (ಒಂದನ್ನು) ತೋರುವ ಈ ಬನ (ಕಾಡು) ಇದರ ನಡುವೆ ಪ್ರೇಮಶುದ್ಧೆ ನೀನು ! ಸುದಿನವು ಈ ದಿನ.

**ಶಬರಿ :** ನನ್ನ ಪೊಗಳಲೇಕೆ (ಹೊಗಳುವೆ ಏಕೆ) ರಾಮ, ಎಲ್ಲ ಅವರ ಕರುಣೆ !
ನೀವು ಇಲ್ಲಿಗೆ ಪಾದ ಬೆಳೆಸಿ ನನ್ನ ಕಂಡ ಕರುಣೆ. ನೀವು ಬಹಿರಿ (ಬರುವಿರಿ) ನಿಮ್ಮ ಕಾಣೆ (ಕಾಣಲು) ನಲ್ಮೆ (ಒಳಿತು) ಅಹುದು (ಆಗುವುದು) ಎಂದು ಸಿದ್ಧರು ಒರೆದ (ಹೇಳಿದ) ಮಾತು ನನಗೆ ಸಿದ್ಧಿ ಆಯಿತು ಇಂದು. . .

**[ಹಾಡುವಳು]**

ಕೋಟಿಕರಗಳಿಂ (ಕೋಟಿಕಿರಣಗಳಿಂದ) ರವಿ ಎತ್ತಿರುವ ಈ । ನೀಲದ (ಆಕಾಶದ) ಆಚೆ (ಹೊರಗೆ) ಗಮನ,
ನನಗೆ + ಈ ಮಾಯೆಯ (ಅಜ್ಞಾನದ) ಆಚೆ (ಹೊರಗೆ) ಪಯಣ ॥ಪ॥
ಹಾರಬಯಸೆನು ಈ ಹಕ್ಕಿಗಳಂತೆ । ತೇಲ ಬಯಸೆನು ಈ ಬಿಳಿಮುಗಿಲಂತೆ
ಕಾರ್ಮೋಡವ ಸೆಳೆಮಿಂಚಿನ ತೆರದೊಳು (ರೀತಿಯಲ್ಲಿ) । ಭವ (ಜನ್ಮ) ಬಿಡೆ ಬಯಸಿಹೆನು (ಬಯಸಿರುವೆನು) ಇಂತೆ !! ಕೋಟಿಕರಗಳಿಂ (ಕೋಟಿ ಕಿರಣಗಳಿಂದ)

**ರಾಮ :** ಮಾತೆಯ ತೆರ ನೀನು ಎಮ್ಮ (ನಮ್ಮ) ಆದರಿಸುತ (ಗೌರವಿಸುತ)
ಬಳಿಕ ಈ ತೆರ (ರೀತಿ) ನುಡಿಯೆ (ನುಡಿಯಲು) ತಾಯೇ । ನಿನಗೆ ಈ ಬಗೆ (ಆಲೋಚನೆ) ಸರಿಯೆ !! . . . . .

**ಶಬರಿ :** ಪುಣ್ಯ ಲೋಕ ದೊರೆಯಲಿ ಎಂದು ಹರಕೆ ಇಡು ಎನಗೆ (ನನಗೆ).

**ರಾಮ :** ಇನಿತು (ಇಷ್ಟು) ಪ್ರಿಯವ ಗೈದ (ಮಾಡಿದ) ನಿನಗೆ ಸಾವೆ (ಮರಣವೆ) ನಮ್ಮ ಕಾಣ್ಕೆ (ಕೊಡುಗೆ) !

**ಶಬರಿ :** ಮರಣವಲ್ಲ ಮುಕ್ತಿ (ಬಿಡುಗಡೆ) ಪ್ರಭೋ ಇದುವೆ ನನ್ನ ಪೂಣ್ಕೆ (ಸಂಕಲ್ಪ) !

**ರಾಮ :** ಮನ ಒಪ್ಪಿದರೂ ಎದೆ (ಹೃದಯ) ಒಪ್ಪದಲಾ (ಒಪ್ಪುತ್ತಿಲ್ಲವಲ್ಲ) !

**ಶಬರಿ :** ನೀನು ಒಲಿದು (ಮೆಚ್ಚಿ) ಒಪ್ಪಲು ದಿವ (ಸ್ವರ್ಗ) ತಪ್ಪದಲಾ (ತಪ್ಪುವುದಿಲ್ಲ) !

**ರಾಮ :** ಬೆರಗಾಗಿಹೆ (ಬೆರಗಾಗಿರುವೆನು) ನಾ (ನಾನು) ನಿನಗೆ ! ಅಸ್ತು (ಆಗಲಿ) ಎಂಬೆ ನಲ್ಮೆಗೆ (ಒಳಿತಿಗೆ) ಅಸ್ತು (ಆಗಲಿ) ಅಸ್ತು (ಆಗಲಿ) ಪೋಗವ್ವಾ (ಹೋಗು ತಾಯಿ) ನಿನ್ನ ಅಭೀಷ್ಟ (ಬಯಕೆ) ಸಿದ್ಧಿಗೆ (ಮೋಕ್ಷಕ್ಕೆ).

**ಶಬರಿ :** ನಮೋ (ನಮಸ್ಕಾರ) ನಮೋ (ನಮಸ್ಕಾರ) ನಿಮಗೆ ನಮೋ (ನಮಸ್ಕಾರ) । ಬನಕೆ (ಕಾಡಿಗೆ) ನಮೋ (ನಮಸ್ಕಾರ) ಮಲೆಗೆ (ಬೆಟ್ಟಕ್ಕೆ) ನಮೋ (ನಮಸ್ಕಾರ) ಎಲ್ಲರಿಗು ಎಲ್ಲಕು ಶರಣು.

**[ವೇದಿಯಲ್ಲಿ (ಯಜ್ಞಕುಂಡದಲ್ಲಿ) ಉದ್ದೀಪ್ತವಾದ (ಉರಿಯುತ್ತಿರುವ) ಅಗ್ನಿಯನ್ನು (ಬೆಂಕಿಯನ್ನು) ಬಲವಂದು (ಪ್ರದಕ್ಷಿಣೆ ಹಾಕಿ) ಹಾಡುತ್ತಾ ಪ್ರವೇಶಿಸುತ್ತಾಳೆ]**

**ರಾಮ :** **ಹೆಣ್ಣ** ರೀತಿಯನು ಅರಿಯಬಹುದೇ (ತಿಳಿಯಬಹುದೇ) । ಅವರ ಬಗೆ (ಮನಸ್ಸು) ಬಲು ಸೋಜಿಗ (ಆಶ್ಚರ್ಯ) ! ಎಂಥ ನಿಷ್ಠೆ ಎಂಥ ಪ್ರೀತಿ । ಇವಳ ಮರೆವುದೆ (ಮರೆಯುವುದೇ) ಈ ಜಗ (ಪ್ರಪಂಚ)?

**ಲಕ್ಷ್ಮಣ :** **ಆರು (ಯಾರು), ಎತ್ತ, ಏಕೆ ಎನ್ನದೆ । ಹಸುಳೆಯಂದದಿ** (ಮಗುವಿನಂತೆ) ಒಲಿದಳು (ಇಷ್ಟವಾದಳು). ಕಾಣುತಲೆ (ನೋಡುತ್ತಲೆ) ಬಹು ನಲಿದಳು ಅಣ್ಣಾ । ನಲವೊಳು (ಆನಂದದಲ್ಲಿ) ಎಮ್ಮನೆ (ನಮ್ಮನ್ನೇ) ಮರೆತಳು.

**ರಾಮ :** ಬೆಳಕಿಗೆ ಒಲಿದವರ್ ಉರಿವ ಬತ್ತಿಯ ಕರುಕ (ಕಪ್ಪ / ಮಸಿಯ) ಕಾಣರು (ನೋಡುವುದಿಲ್ಲ) ಲಕ್ಷ್ಮಣ ಬಾಳ (ಬದುಕನ್ನು) ಸುತ್ತಿಹ (ಸುತ್ತಿರುವ) ದೇವ ತೇಜವ (ಕಾಂತಿಯ) । ಕಾಂಬರಿಗೆ (ಕಾಣುವವರಿಗೆ) ಇದೆ ಲಕ್ಷಣ.

**ಲಕ್ಷ್ಮಣ :** ಅಸುರನ (ರಾಕ್ಷಸನ) ಎಡರಿಂ (ತೊಂದರೆಯಿಂದ) ಕಾದು (ಹೋರಾಡಿ) ತನ್ನ ಎಡೆಗೆ (ಕಡೆಗೆ) ಎಮ್ಮ (ನಮ್ಮ) ಸೆಳೆದ ಈ ಅರ್ತಿಗೆ (ಪ್ರೀತಿಗೆ), ಏನನು ಎಂಬೆನು (ಹೇಳುವೆನು) ಅಣ್ಣ, ಇಂತೆಯೆ (ಈ ರೀತಿಯೆ) । ನೆನೆಯುತ್ತ ಇರಬಹುದು ಅತ್ತಿಗೆ.

**ರಾಮ ;** ಇರಬಹುದು ಇರಬಹುದು – ಸೀತೇ । ಹಾ ಪ್ರಿಯೇ ಚಂದ್ರ ಆನನೇ (ಮುಖಿ)! ಎಲ್ಲಿರುವೆ, ಎಂತಿರುವೆ (ಹೇಗಿರುವೆ), ನಿನ್ನನು । ಜೀವದೊಂದಿಗೆ (ಜೀವ ಸಹಿತ) ಕಾಂಬೆನೆ (ಕಾಣುವೆನೆ)?

**ಲಕ್ಷ್ಮಣ :** ಭೂಮಿ ತಾಯಿಯು ತನ್ನ ಮಗಳನು । ಎಲ್ಲಿರಲಿ ಅದೆ ತವರೆನೆ ಪೊರೆವಳ್ಳೆ (ಪೊರೆಯುವಳಲ್ಲವೇ), ಧೃತಿಯಾನು (ಧೈರ್ಯತಂದುಕೋ), ಚಿಂತಿಸು (ಯೋಚಿಸು) ಮುಂದಿನ ಹವಣನೆ (ಉಪಾಯವನ್ನು).

**ರಾಮ :** ಅಹುದು (ಹೌದು) ಅಹುದು (ಹೌದು) ಮರೆತಿದ್ದೆ ಲಕ್ಷ್ಮಣ । ಪಂಚಭೂತದಿ (ಪಂಚಭೂತಗಳಲ್ಲಿ) ಬೆರೆಯುತ ಶಬರಿ ಸೀತೆಗೆ ರಕ್ಷೆಯಿಡಲಿ (ರಕ್ಷಣೆ ಮಾಡಲಿ)। ಪೋಪ (ಹೋಗುವ) ಬಾ ನೆರವ (ಸಹಾಯವ) ಅರಸುತ (ಹುಡುಕುತ).

ಶುಭಂ

**ಶಿಕ್ಷಕ ಮಿತ್ರರೇ ನಿಮ್ಮ ಅನಿಸಿಕೆ ತಿಳಿಸಿರಿ. ತಪ್ಪುಗಳಿದ್ದರೆ ಗಮನಕ್ಕೆ ತನ್ನಿರಿ.**